SC:102/2024
PW:06 CW:10

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 102/2024

| | |
|---|---|
| PW | 06 |
| CW | 10 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 13.08.2026

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀನಾಥ್ |
| ತಂದೆಯ ಹೆಸರು | : | ಶ್ರೀರಾಮಪ್ಪ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಕನಗಾನಕೊಪ್ಪ ಗ್ರಾಮ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ'**

ಈ ಕೇಸಿನ ಮೃತರುಗಳಾದ ಮೆಹಬೂಬ್ ಸಾಬ್ ಮತ್ತು ನಜೀರ್ ಅಹಮದ್ ರವರುಗಳು ನನಗೆ ಗೊತ್ತಿರುವುದಿಲ್ಲ . ಚಾಸ.1 ರಿಂದ 9 ಮತ್ತು ಇತರೆ ಸಾಕ್ಷಿದಾರರುಗಳು ಗೊತ್ತಿರುವುದಿಲ್ಲ . ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿದ ಆರೋಪಿಯ ಪರಿಚಯ ಇರುತ್ತದೆ ಮತ್ತು ನೋಡಿರುತ್ತೇನೆ .

2. ನಾನು ಕೂಲಿ ಕೆಲಸ ಮತ್ತು ಚಿಕ್ಕಬಳ್ಳಾಪುರದಲ್ಲಿ ಏಪ್ರಿಲ್ ತಿಂಗಳು 2024 ರಿಂದ ಶ್ರೀಕೃಷ್ಣ ಡಿಲೆಕ್ಸ್ ಲಾಡ್ಜ್ ನ್ನು ತಿಂಗಳ ಬಾಡಿಗೆಗೆ ತೆಗೆದುಕೊಂಡು ನಡೆಸುತ್ತಿರುತ್ತೇನೆ . ಸುಮಾರು 1 ವರ್ಷದ ಹಿಂದೆ ಗುಡಿಬಂಡೆ ಪೊಲೀಸರು ಆರೋಪಿಯನ್ನು ನಮ್ಮ ಡಿಲೆಕ್ಸ್

ಲಾಡ್ಜ್ ಗೆ ಕರೆದುಕೊಂಡು ಬಂದಿದ್ದರು . ಅವನನ್ನು ತೋರಿಸಿ ಅವರ ಹೆಸರು ಮೊಹಮದ್ ಬಶೀರ್ ಎಂದು ಹೇಳಿದ್ದರು. ಗುಡಿಬಂಡೆ ಯಿಂದ ಆತನನ್ನು ಕರೆದುಕೊಂಡು ಬಂದಿರುವುದಾಗಿ ಹೇಳಿದರು . ನಂತರ ಅವರು ನೇರವಾಗಿ ನನ್ನ ಲಾಡ್ಜ್ ನ ರೂಂ ನಂ.110 ಕ್ಕೆ ಕರೆದುಕೊಂಡು ಹೋದರು. ಆ ನಂತರ ರೂಮ್ ನಿಂದ ಆರೋಪಿಯನ್ನು ಕರೆದುಕೊಂಡು ಬಂದರು . ನಂತರ ನಾನು ಯಾವ ವಿಚಾರಕ್ಕಾಗಿ ಬಂದಿರುತ್ತೀರಿ ಎಂದು ಪೊಲೀಸರನ್ನು ಕೇಳಿದಾಗ ಆರೋಪಿಯು ನಮ್ಮ ಲಾಡ್ಜ್ ನ ರೂ ನಂ.110 ರಲ್ಲಿ 4 ದಿನ ಸ್ಟೇ ಆಗಿರುತ್ತಾರೆ ಎಂದು ತಿಳಿಸಿರುತ್ತಾರೆ . ಆರೋಪಿಯು ರೂಂ ನಂ.110 ನಲ್ಲಿ ವಾಸ ಇದ್ದ ಸಮಯದಲ್ಲಿ ಸದರಿ ಲಾಡ್ಜ್ ನ್ನು ನಾನು ಬಾಡಿಗೆಗಾಗಿ ತೆಗೆದುಕೊಂಡು ನಡೆಸುತ್ತಿರಲಿಲ್ಲ .

3. ನಂತರ ನಾನು ಪೊಲೀಸರಿಗೆ ವಿಚಾರಿಸಿದಾಗ ಪೋಲೀಸರು ನನಗೆ ಹೇಳಿದ್ದೇನೆಂದರೆ ಆರೋಪಿಯು ನಮ್ಮ ಲಾಡ್ಜ್ ನ ರುಮ್ ನಂ.110 ರಲ್ಲಿ 4 ದಿನ ಇದ್ದು ಆ ಅವಧಿಯಲ್ಲಿ ಗುಡಿಬಂಡೆಗೆ ಹೋಗಿ ಅಲ್ಲಿ ಕೊಲೆ ಮಾಡಿರುತ್ತಾರೆ ಎಂದು ತಿಳಿಸಿದರು . ನಮ್ಮ ಲಾಡ್ಜ್ ನಲ್ಲಿ ಇದ್ದಾಗ ಆರೋಪಿ ಒಂದು ಪಿಸ್ತೂಲ್ ನ್ನು ಖರೀದಿ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ. ನಂತರ ಪೊಲೀಸರು ಆರೋಪಿಯು ನಮ್ಮ ಲಾಡ್ಜ್ ನಲ್ಲಿ ವಾಸ ಇದ್ದ ಸಂದರ್ಭದಲ್ಲಿ ಅವರಿಗೆ ಸಂಬಂಧಪಟ್ಟಂತೆ ಏನು ದಾಖಲೆಗಳನ್ನು ಪಡೆದುಕೊಳ್ಳಲಾಗಿರುತ್ತದೆ ಅವುಗಳನ್ನು ಹಾಜರುಪಡಿಸಲು ಹೇಳಿದರು . ನಮ್ಮ ಹಿಂದೆ ಲಾಡ್ಜ್ ನ್ನು ನಡೆಸುತ್ತಿದ್ದವರು ಯಾವುದೇ ದಾಖಲಾತಿಗಳನ್ನು ಕೊಟ್ಟು ಹೋಗಿರುವುದಿಲ್ಲ ಮತ್ತು ನಾನು ಲಾಡ್ಜ್ ನ್ನು ನಡೆಸುತ್ತಿದ್ದ ಕಾಲಕ್ಕೆ ಆರೋಪಿಯು ಇರಲಿಲ್ಲ ಎಂದು ತಿಳಿಸಿರುತ್ತೇನೆ . ನಂತರ ಲಾಡ್ಜ್ ನಲ್ಲಿ ಪೊಲೀಸರು ಮಹಜರ್ ಮಾಡಿಕೊಂಡು ಹೋಗಿರುತ್ತಾರೆ . ಈಗ ನಾನು ನೋಡುತ್ತಿರುವ ಫೋಟೋವನ್ನು ನಮ್ಮ ಲಾಡ್ಜ್ ನಲ್ಲಿ ತೆಗೆಯಲಾಗಿದ್ದು ಸದರಿ ಫೊಟೋದಲ್ಲಿ ನಾನು , ಪೊಲೀಸರು ಮತ್ತು ಆರೋಪಿ ಇರುತ್ತಾರೆ . ಉಳಿದವರು ಗೊತ್ತಿರುವುದಿಲ್ಲ . ಸದರಿ ಫೋಟೋವನ್ನು **ನಿಪಿ.**11 ಎಂದು ಗುರುತಿಸಲಾಯಿತು.

4. ಪೊಲೀಸರು ಆರೋಪಿಯನ್ನು ಕರೆದುಕೊಂಡು ಬಂದು ನನಗೆ ಹೇಳಿದ್ದೇನೆಂದರೆ ಆರೋಪಿಯು ನಮ್ಮ ಲಾಡ್ಜ್ ನ ರೂಮ್ ನಂ.110 ರಲ್ಲಿ ಇದ್ದು ಅಲ್ಲಿ ಇದ್ದಾಗ ಒಂದು ಪಿಸ್ತೂಲ್ ನ್ನು ಖರೀದಿಸಿದ್ದು ನಂತರ ಗುಡಿಬಂಡೆಗೆ ಹೋಗಿ ಕೊಲೆ ಮಾಡಿರುತ್ತಾನೆ ಎಂದು ಮಾತ್ರ ತಿಳಿಸಿರುತ್ತಾರೆ . ಆರೋಪಿಯು ಜಮೀನು ವಿಚಾರಕ್ಕೆ ಸಂಬಂಧಿಸಿದಂತೆ ತನ್ನ ಸ್ವಂತ ತಮ್ಮನನ್ನೇ ಪಿಸ್ತೂಲ್ ನಿಂದ ಶೂಟ್ ಮಾಡಿ ಕೊಲೆ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ . ಉಳಿದ ವಿಷಯ ಗೊತ್ತಿರುವುದಿಲ್ಲ . ಪಿಸ್ತೂಲ್ ನ್ನು ಯಾರಿಂದ ಖರೀದಿ ಮಾಡಿರುತ್ತಾನೆ ಎಂದು ಗೊತ್ತಿರುವುದಿಲ್ಲ ಮತ್ತೆ ಬೇರೆ ಯಾರನ್ನು ಕೊಲೆ ಮಾಡಿರುತ್ತಾನೆ ಎಂದು ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ – ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

5. ನಾನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೇನೆಂದರೆ ಸದರಿ ಆರೋಪಿಯು ತಾನು ಸತ್ಯರಾಜ್ ಬಿಹಾರ್ ರಾಜ್ಯ ಎಂಬುವವರ ಬಳಿ ಖರೀದಿಸಿದ ಪಿಸ್ತೂಲ್ ಸರಿಯಾಗಿ ಲೋಡ್ ಆಗದೇ ಇದ್ದು ಪಿಸ್ತೂಲ್ 2–3 ಕಡೆ ಸೀಳಿದ್ದು ತನಗೆ ಪಿಸ್ತೂಲ್ ಫಯರ್ ಮಾಡುವಾಗ ಬ್ರಾಸ್ಟ್ ಆಗಬಹುದೆಂಬ ಬಗ್ಗೆ ಭಯವಾಗಿ ತಾನು ಸತ್ಯಂ ರವರಿಗೆ ಫೋನ್ ಮಾಡಿ ವಿಚಾರವನ್ನು ತಿಳಿಸಿದ್ದು, ಆತನು ಚೆನ್ನಾಗಿರುವ ಪಿಸ್ತೂಲ್ ಕೊಡುತ್ತೇನೆ ಬೇಕೆಂದರೆ ಇನ್ನು 3 ಲಕ್ಷ ಆಗುತ್ತೆ ಎಂದು ಹೇಳಿದ್ದು ನಂತರ ತಾನು ಹಣವನ್ನು ರೆಡಿ ಮಾಡಿಕೊಂಡು ಇದೇ ವರ್ಷದ ಪಬ್ರವರಿ ತಿಂಗಳಲ್ಲಿ. ನಾನು ಸತ್ಯಂ ರವರಿಗೆ ಫೋನ್ ಮಾಡಿ 3 ಲಕ್ಷ ಹಣವನ್ನು ಕೊಡುತ್ತೇನೆ ಪಿಸ್ತೂಲ್ ತೆಗೆದುಕೊಂಡು ಬಾ ಎಂದು ಹೇಳಿದ್ದು ಹಾಗೂ ಇದೇ 2024 ವರ್ಷ ಪೆಬ್ರವರಿ ತಿಂಗಳಲ್ಲಿ ಒಂದು ದಿನ ಸತ್ಯಂ ರವರು ಚಿಕ್ಕಬಳ್ಳಾಪುರಕ್ಕೆ ಬಂದಿದ್ದು ತಾನು ಸಹ ಚಿಕ್ಕಬಳ್ಳಾಪುರಕ್ಕೆ ಹೋಗಿ ಚಿಕ್ಕಬಳ್ಳಾಪುರ ಬಿ.ಬಿ. ರಸ್ತೆಯಲ್ಲಿರುವ ಶ್ರೀಕೃಷ್ಣ ಡಿಲಕ್ಸ್ ಲಾಡ್ಸ್ ನಲ್ಲಿ ಒಂದು ರೂಮ್ ನ್ನು ಪಡೆದುಕೊಂಡು ರೂಂಗೆ ಹೋಗಿದ್ದು,

ಸದರಿ ರೂಂನಲ್ಲಿ ಸತ್ಯಂ ಅವರು ತನಗೆ ಹಿಂದೆ ಕೊಟ್ಟಿದ್ದ ಪಿಸ್ತೂಲ್ ನ್ನು ತೆಗೆದುಕೊಂಡು ಬೇರೆ ಪಿಸ್ತೂಲ್ ನ್ನು ಕೊಟ್ಟಿದ್ದ ಸ್ಥಳವನ್ನು ತನ್ನೊಂದಿಗೆ ಬಂದರೆ ತೋರಿಸುವುದಾಗಿ ತಿಳಿಸಿರುವುದರಿಂದ ಸದರಿ ರೂಂ ನಲ್ಲಿ ಪಂಚನಾಮ ಕ್ರಮ ಜರುಗಿಸಲು ಆರೋಪಿ ಹೇಳಿ ತೋರಿಸಿದಂತೆ ಪಂಚರೊಂದಿಗೆ ಇಲ್ಲಿಗೆ ಬಂದಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ .

6. ನಂತರ ಆರೋಪಿ ಮೊಹಮದ್ ಬಷೀರ್ ಅಹಮದ್ ರವರು 1 ನೇ ಮಹಡಿಗೆ ಪೊಲೀಸರನ್ನು ಕರೆದುಕೊಂಡು ಬಂದಿದ್ದು ನಂತರ ಈ ಹೋಟೆಲ್ ನ 1 ನೇ ಮಹಡಿಯಲ್ಲಿರುವ ರೂ ನಂ 110 ನ್ನು ತೋರಿಸಿ ತಾನು ಮತ್ತು ಸತ್ಯಂ @ ಸತ್ಯರಾಜ್ ರವರು ಉಳಿದುಕೊಂಡಿದ್ದ ರೂಂ ಇದೇ ಎಂದು ಹೇಳಿ ತೋರಿಸಿದ್ದು ನಂತರ ನಾನು ಈ ರೂಂ ಗೆ ಹಾಕಿದ್ದ ಬೀಗವನ್ನು ತೆಗೆದಿರುತ್ತೇನೆ ಹಾಗೂ ಶ್ರೀಕೃಷ್ಣ ಡಿಲಕ್ಸ್ ಲಾಡ್ಜ್ ನ 1 ನೇ ಮಹಡಿಯಲ್ಲಿರುವ ರೂಂ ನಂ 110 ರಲ್ಲಿ , ಆರೋಪಿ ಮೊಹಮದ್ ಬಷೀರ್ @ ಮಹಮದ್ ಬಷೀರ್ @ ಬಹೀರ್ ಅಹಮದ್ ರವರು ಪಂಚರಿಗೆ ಮತ್ತು ತನಿಖಾಧಿಕಾರಿಗಳಿಗೆ ತಿಳಿಸಿದನೇಂದರೆ ಪಿತ್ರಾರ್ಜಿತ ಜಮೀನನ್ನು ತನಗೆ ಸರಿಯಾಗಿ ಹಂಚಿಕೆ ಅಹಮ್ಮದ್ ರವರ ಪಾತ್ರ ಇರುವುದಾಗಿ ಅನುಮಾನದಿಂದ ಮೊಹಮದ್ ಬಷೀರ್ @ ಮಹಮದ್ ಬಷೀರ್ @ ಬಸೀರ್ ಅಹಮದ್ ರವರು ಮಾಡಿರುವುದಿಲ್ಲ ಎಂದು ಮತ್ತು ತನ್ನ ಪತ್ನಿ ಮತ್ತು ಮಕ್ಕಳು ನನ್ನಿಂದ ದೂರವಾಗಲು ಮೆಹಬೂಬ್ ಸಾಬ್ ಮತ್ತು ಆತನ ಮಗ ನಜೀರ್ ಅಹಮ್ಮದ್ ರವರ ಮೇಲೆ ದ್ವೇಷ ಇಟ್ಟುಕೊಂಡು ತನ್ನ ಅಣ್ಣನಾದ ಮಹಬೂಬ್ ಸಾಬ್ ಮತ್ತು ಆತನ ಮಗ ನಜೀರ್ ಅಹಮ್ಮದ್ ಹಾಗೂ ತನ್ನ ಹೆಂಡತಿಯನ್ನು ಕೊಲೆ ಮಾಡಬೇಕೆಂದು ನಿರ್ಧಾರ ಮಾಡಿ ಸದರಿಯವರನ್ನು ಕೊಲೆ ಮಾಡಲು ತನಗೆ ಪಿಸ್ತೂಲ್ ಬೇಕಾಗಿದ್ದರಿಂದ ಈಗ್ಗೆ ಸುಮಾರು 04 ವರ್ಷಗಳ ಹಿಂದೆ ತಾನು ಯಾಟೂಬ್ ನಲ್ಲಿ ಪಿಸ್ತೂಲ್‌ಗಳ ಬಗ್ಗೆ ವಿಡಿಯೋ ನೋಡುತ್ತಿದ್ದಾಗ ಆದರಲ್ಲಿ ಪಿಸ್ತೂಲ್ ಬೇಕಿದ್ದರೆ ಕಾಲ್ ಮಾಡಿ ಎಂದು ಮೊಬೈಲ್ ನಂಬರ್ ಇನ್ನು ತಾನು ಸದರಿ ಮೊಬೈಲ್ ನಂಬರಿಗೆ ಕಾಲ್ ಮಾಡಿದಾಗ ಸತ್ಯ @ ಸತ್ಯಂ ರಾಜ್ ಬಿಹಾರ ರಾಜ್ಯ ರವರು ತನಗೆ ಪರಿಚಯವಾಗಿ ಆತನಿಗೆ ತಾನು ಪಿಸ್ತೂಲ್ ತೆಗೆದುಕೊಂಡು ಬಂದರೆ ತಾನು ಹಣವನ್ನು ಕೊಡುವುದಾಗಿ ತಿಳಿಸಿದ್ದರಿಂದ ದಿಃ20/10/2022 ಬೆಂಗಳೂರಿಗೆ ಬಂದಿದ್ದು ನಂತರ ನಾನು

ಆತನನ್ನು ಬೆಂಗಳೂರಿನಿಂದ ಬಸ್ ನಲ್ಲಿ ದೊಡ್ಡ ಬಳ್ಳಾಪುರ ಲೋಟಸ್ ಗಾರ್ಡನಿಯಾ ಬೋರ್ಡಿಂಗ್ ಮತ್ತು ಲಾಡ್ಡಿಂಗ್ ಹೋಟಲ್ ಗೆ ಕರೆದುಕೊಂಡು ಬಂದು ತಾನು ಸದರಿ ಹೋಟಲ್ ನಲ್ಲಿ ರೂಂ.ನಂ:201 ನ್ನು ಬಾಡಿಗೆ ತೆಗೆದುಕೊಂಡು ತಾನು ಮತ್ತು ಸತ್ಯಂ @ ಸತ್ಯ: ರಾಜ್ ಬಿಹಾರ ರಾಜ್ಯ ರವರು ಸದರಿ ರೂಂ ನಲ್ಲಿ ಇದ್ದಾಗ ತಾನು ಸತ್ಯಂ @ ಸತ್ಯಂ ರಾಜ್ ಬಿಹಾರ ರಾಜ್ಯ ರವರಿಗೆ 2.25 ಲಕ್ಷ ರೂಪಾಯಿ ಹಣವನ್ನು ನೀಡಿದಾಗ ಸತ್ಯಂ @ ಸತ್ಯಂ ರಾಜ್ ರವರು ತನಗೆ ಒಂದು ಪಿಸ್ತೂಲ್ ಮತ್ತು ಅದಕ್ಕೆ ಹಾಕುವ 22 ಜೀವಂತ ಗುಂಡುಗಳನ್ನು ನೀಡಿ ಅದನ್ನು ಹೇಗೆ ಉಪಯೋಗಿಸಬೇಕು ಎಂದು ಹೇಳಿಕೊಟ್ಟು ಸತ್ಯಂ ರವರು ವಾಪಸು ಬೆಂಗಳೂರುಗೆ ಹೊರಟು ಹೋಗಿದ್ದು ತಾನು ಇಲಿಂದ ಬಸ್ ನಲ್ಲಿ ಊರಿಗೆ ಹೊರಟು ಹೋಗಿದ್ದು ತಾನು ತನ್ನ ಅಣ್ಣನಾದ ಮಹಬೂಬ್ ಸಾಬ್ ಮತ್ತು ಆತನ ಮಗ ನಜೀರ್ ಅಹಮ್ಮದ್ ಹಾಗೂ ತನ್ನ ಹೆಂಡತಿಯನ್ನು ಕೊಲೆ ಮಾಡಬೇಕೆಂದು ಒಂದು ಪಿಸ್ತೂಲ್ ಮತ್ತು ಅದಕ್ಕೆ ಹಾಕುವ 22 ಜೀವಂತ ಗುಂಡುಗಳನ್ನು ಸತ್ಯಂ @ ಸತ್ಯಂ ರಾಜ್ ಬಿಹಾರ ರಾಜ್ಯ ರವರಿಂದ ದೊಡ್ಡ ಬಳ್ಳಾಪುರ ಟೌನ್ ನಲಿದಿರುವ ಲೋಟಸ್ ಗಾರ್ಡನಿಯ ಲಾಡ್ಜ್ ನಲ್ಲಿ ಒಂದು ರೂಂ ನಲ್ಲಿ ಖರೀದಿ ಮಾಡಿದ್ದು ನಂತರ ಆರೋಪಿಯು ತಾನು ಸತ್ಯ ರಾಜ್ ಬಿಹಾರ್ ರಾಜ್ಯ ಎಂಬುವವರ ಬಳಿ ಖರೀದಿಸಿದ ಪಿಸ್ತೂಲ್ ಸರಿಯಾಗಿ ಲೋಡ್ ಆಗದೇ ಇದ್ದು ಮತ್ತು 2-3 ಕಡೆ ಸೀಳಿದ್ದು ತನಗೆ ಪಿಸ್ತೂಲ್ ಫೈರ್ ಮಾಡುವಾಗ ಬಾಸ್ಟ್ ಆಗಬಹುದು ಎಂಬ ಬಗ್ಗೆ ಭಯವಾಗಿ ತಾನು ಸತ್ಯಂ ರವರಿಗೆ ಫೋನ್ ಮಾಡಿ ವಿಚಾರವನ್ನು ತಿಳಿಸಿದ್ದು, ಆತನು ಚೆನ್ನಾಗಿರುವ ಪಿಸ್ತೂಲ್ ಕೋಡುತ್ತೇನೆ ಬೇಕೆಂದರೆ ಇನ್ನು 3 ಲಕ್ಷ ಆಗುತ್ತದೆ ಎಂದು ತಿಳಿಸಿದ್ದು ನಂತರ ತಾನು ಹಣವನ್ನು ರೆಡಿ ಮಾಡಿಕೊಂಡು ಇದೇ ವರ್ಷ ಫೆಬ್ರವರಿ ತಿಂಗಳಿನಲ್ಲಿ ನಾನು ಸತ್ಯಂ ರವರಿಗೆ ಫೋನ್ ಮಾಡಿ 3 ಲಕ್ಷ ಹಣವನ್ನು ಕೊಡುತ್ತೇನೆ ಪಿಸ್ತೂಲ್ ತೆಗೆದುಕೊಂಡು ಬಾಡಿ ಎಂದು ಹೇಳಿದ್ದು ಇದೇ 2024 ಫೆಬ್ರವರಿ ತಿಂಗಳಿನಲ್ಲಿ ಸತ್ಯಂ ರವರು ಚಿಕ್ಕಬಳ್ಳಾಪುರ ಕ್ಕೆ ಬಂದಿದ್ದು ತಾನು ಸಹಾ ಚಿಕ್ಕಬಳ್ಳಾಪುರಕ್ಕೆ ಹೋಗಿ ಚಿಕ್ಕಬಳ್ಳಾಪುರ ಬಿ ಬಿ ರಸ್ತೆಯಲ್ಲಿರುವ ಶ್ರೀ ಕೃಷ್ಣ ಡಿಲಕ್ಸ್ ನಲಲ್ಲಿ ಒಂದು ರೂಮನ್ನು ಪಡೆದುಕೊಂಡು ರೂಮ್ ಗೆ ಹೋಗಿದ್ದು ಸದರಿ ರೂಮ್ ನಲ್ಲಿ ಸತ್ಯಂ ರವರು ತನಗೆ ಹಿಂದೆ ಕೊಟ್ಟಿದ್ದ ಪಿಸ್ತೂಲ್ ನ್ನು ತೆಗೆದುಕೊಂಡು ಬೇರೆ ಪಿಸ್ತೂಲ್ ನ್ನು ಕೊಟ್ಟಿದ್ದ ಸ್ಥಳ ಇದೇ ಎಂದು 1 ನೇ ಮಹಡಿಯಲ್ಲಿರುವ ರೂಮ್ ನಂ.110

ನ್ನು ತೋರಿಸಿದ್ದರಿಂದ ಸದರಿ ಸ್ಥಳದಲ್ಲಿ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಪಂಚನಾಮೆ ಕ್ರಮ ಕೈಗೊಂಡಿರುತ್ತಾರೆ ಎಂದರೆ ಸರಿಯಲ್ಲ .

7. ಗುಡಿಬಂಡೆ ಪೊಲೀಸರಿಂದ ಆರೋಪಿಯು ಮಾಡಿರುವ ಕೃತ್ಯದ ಬಗ್ಗೆ ತಿಳಿದುಕೊಳ್ಳಲಾಗಿ ಆರೋಪಿಯು ಸುಮಾರು 10 ವರ್ಷಗಳ ಹಿಂದೆ ಅವರ ಹೆಂಡತಿ ಮತ್ತು ಮಕ್ಕಳು ಬಾಗೇಪಲ್ಲಿಗೆ ಹೋಗಿ ಅವರ ಹೆಂಡತಿಯ ತಂದೆ ಮೌಲಾಲಿ ರವರ ಜೊತೆಗೆ ಬಾಡಿಗೆ ಮನೆಯನ್ನು ಮಾಡಿಕೊಂಡು ಕೊತ್ತಪಲ್ಲಿ ರಸ್ತೆಯ 7 ನೇ ವಾರ್ಡ್ ನಲ್ಲಿ ವಾಸವಾಗಿದ್ದು ಸುಮಾರು 7 ವರ್ಷಗಳ ಹಿಂದೆ ಆರೋಪಿಯು ಸೌದಿ ಅರೇಬಿಯಾದಿಂದ ಬಂದು ಅಂದಿನಿಂದ ಹಂಪಸಂದ್ರ ಗ್ರಾಮದಲ್ಲಿ ಜೀವನ ಮಾಡಿಕೊಂಡಿದ್ದಾಗಿ ಮತ್ತು ಅವರ ತಾಯಿಯಾದ ರಸೂಲ್ ಬೀ ಕೋಣ ಶೇಟ್ ನಾಜಾಸಾಬ್ ರವರ ಹೆಸರಿನಲ್ಲಿ ಗುಡಿಬಂಡೆ ತಾ. ಕಸಬಾ ಹೋಬಳಿ ಲಕ್ಷಣಪುರ ಗ್ರಾಮದ ಸರ್ವೆ ನಂ:32 ರಲ್ಲಿನ 02 ಎಕರೆ 25 ಗುಂಟೆ ಜಮೀನಿನಲ್ಲಿ ಮೊಹಮರ್ ಬಷೀರ್ @ ಮಹಮದ್ ಬಷೀರ್ ಬಷೀರ್ ಅಹರ್ ರವರ ಭಾಗಕ್ಕೆ ಬರಬೇಕಾಗಿದ್ದ 35 ಗುಂಟೆ ಜಮೀನನ್ನು ಮತ್ತು ಗುಡಿಬಂಡೆ ತಾಲೂಕು ಕಸಬಾ ಹೋಬಳಿ ಹಂಪಸಂದ್ರ ಗ್ರಾಮದ ಹಳೆ ಸನಂ.32 ರಲ್ಲಿ 2 ಎಕರೆ 25 ಗುಂಟೆ ಜಮೀನಿನಲ್ಲಿ ತನಗೆ ಬರಬೇಕಾಗಿ 35 ಗುಂಟೆ ಜಮೀನನ್ನು ಮತ್ತು ಗುಡಿಬಂಡೆ ತಾಲ್ಲೂಕು ಹಳೆ ಸನಂ.32 ಹೊಸ ಸನಂ.62 ರಲ್ಲಿ 14 ಗುಂಟೆ ಜಮೀನನ್ನು ಮೆಹಬೂಬ್ ಸಾಬ್ ಮತ್ತು ಅವರ ಮಗ ನಜೀರ್ ಅಹಮದ್ ರವರು ಸೇರಿಕೊಂಡು ಮೇಲ್ಕಂಡ ಜಮೀನುಗಳನ್ನು ಆರೋಪಿಗೆ ರವರಿಗೆ ನೀಡದೇ ನೇರವಾಗಿ ರಸೂಲ್ ಬೀ ರವರ ಕಡೆಯಿಂದ ದಾನ ಪತ್ರದ ಮೂಲಕ ಮೊಹಮದ್ ಬಹೀರ್ ಮಹಮದ್ ಬಷೀರ್ ಹೆಸರಿಗೆ ಮಾಡಿಸಿದ್ದರಿಂದ ಮತ್ತು ಮೇಲ್ಕಂಡ ಜಮೀನುಗಳನ್ನು ಆರೋಪಿ ರವರ ಮಕ್ಕಳ ಮೂಲಕ ಬೇರೆಯವರಿಗೆ ಮಾರಾಟ ಮಾಡಿಸಿ ಆರೋಪಿಗೆ ಹಣ ನೀಡದೇ ಇದ್ದದ್ದರಿಂದ ಹಾಗೂ ಆರೋಪಿಯ ಹಿರಿಯ ಅಣ್ಣನಾದ ಮಹಬೂಬ್ ಸಾಬ್ ರವರು ಸರಿಯಾಗಿ ಆಸ್ತಿಯನ್ನು ಭಾಗ ಮಾಡಿಲ್ಲ ಎಂದು ತಪ್ಪಾಗಿ ತಿಳಿದುಕೊಂಡು ಆರೋಪಿಯು ಆಗಾಗ ವಿನಾಕಾರಣ ಆಸ್ತಿ ವಿಚಾರದಲ್ಲಿ. ಮತ್ತು ಆತನ ಹೆಂಡತಿ ಮತ್ತು ಮಕ್ಕಳು ದೂರವಾಗಿರುವ ವಿಚಾರದಲ್ಲಿ ಮೆಹಬೂಬ್ ಸಾಬ್ ಮತ್ತು ನಜೀರ್ ಅಹಮದ್ ಮತ್ತು ಅವರ ಕುಟುಂಬದ ದೊಂದಿಗೆ ಜಗಳ ಮಾಡುವುದು ,

ಬೈದಾಡುತ್ತಾ ಮಾಡುತ್ತಾ ದ್ವೇಷವನ್ನು ಇಟ್ಟುಕೊಂಡಿದ್ದು ಸುಮಾರು 4 ವರ್ಷದ ಹಿಂದೆ ಆರೋಪಿಯು ಪಿಸ್ತೂಲ್ ಗಳ ಬಗ್ಗೆ ವಿಡಿಯೋ ನೋಡಿ, ಅದರಲ್ಲಿದ್ದ ಒಂದು ಫೋನ್ ನಂಬರಿಗೆ ಫೋನ್ ಮಾಡಿ ಪಿಸ್ತೂಲ್ ಬೇಕು ಎಂದು ಕೇಳಿ, ಸತ್ಯಂ @ ಸತ್ಯಂ ರಾಜ್ @ ರಾಜಾ ಜಮೂಯಿ ಜಿಲ್ಲೆ,,, ಬಿಹಾರ ರಾಜ್ಯ ಎಂಬುವವರಿಗೆ 2.25 ಲಕ್ಷ ರೂಪಾಯಿಗಳನ್ನು ನೀಡಿ ಆತನ ಬಳಿಯಿಂದ ಒಂದು ಪಿಸ್ತೂಲ್ ಮತ್ತು 22 ಜೀವಂತ ಗುಂಡುಗಳನ್ನು ಪಡೆದುಕೊಂಡಿರವುದಾಗಿ, ಇದೇ ವರ್ಷದ ಜೂನ್ ತಿಂಗಳಲ್ಲಿ 4 ನೇ ತಾರೀಖು ಲೋಕಸಬಾ ಚುನಾವಣಾ ಕೌಂಟಿಂಗ್ ಇದ್ದುದ್ದರಿಂದ ಆ ಸಮಯದಲ್ಲಿ ಪಿಸ್ತೂಲ್ ಟ್ರಯಲ್ ವೈರ್ ಮಾಡಿದರೆ ಬರುವ ಶಬ್ದವನ್ನು ಜನ ಪಟಾಕಿ ಎಂದು ತಿಳಿದುಕೊಳ್ಳುವುದಾಗಿ ಮಧ್ಯಾಹ್ನ ಕೌಂಟಿಂಗ್ ಆದ ಮೇಲೆ ಆರೋಪಿ ಗೆ ಆತನು ವಾಸವಿದ್ದ ಹಂಪಸಂದ್ರದ ಮನೆಯಲ್ಲಿ ಒಂದು ಕಟ್ಟಿಗೆ ಹಲಗೆಗೆ ಪಿಸ್ತೂಲ್ ನಿಂದ ಒಂದು ಗುಂಡು ಟ್ರಯಲ್ ವೈರ್ ಮಾಡಿರುವುದಾಗಿ ಕೃತ್ಯ ಎಸಗಿದ ನಂತರ ಆರೋಪಿ ತನ್ನ ಆತ್ಮ ರಕ್ಷಣೆ ಮುನ್ನಚ್ಚರಿಗೆಗಾಗಿ 1] ಪೆಪ್ಪರ್ ಸ್ಪ್ರೇ 2) ರೆಡ್ ಚಿಲ್ಲಿ, ಸ್ಪ್ರೇ 3] ಒಂದು ಸ್ಟೀಲ್ ಚಾಕು, 4] ಶೇವಿಂಗ್ ರೇಜರ್ 5] ಒಂದು ಬಟನ್ ಪ್ರೇಸಿಂಗ್ ಡ್ರಾಗನ್ ಆನ್ ಲೈನ್ ನಲ್ಲಿ ತೆಗೆದುಕೊಂಡು ನಂತರ ಮನೆಯಲ್ಲಿದ್ದ ಒಂದು ಕಬ್ಬಿಣದ ಮಚ್ಚನ್ನು ತನ್ನ ಬಳಿ ಇಟ್ಟುಕೊಂಡಿದ್ದಾಗಿ ಹಾಗೂ ದಿನಾಂಕ:24/07/2024 ರಂದು ಬೆಳಗಿನ ಜಾವ ಸುಮಾರು 5-30 ಗಂಟೆಯಲ್ಲಿ ಆರೋಪಿಯು ಆತನ ಅಣ್ಣನ ಮಗನಾದ ನಜೀರ್ ಅಹಮದ್ ರವರನ್ನು ಕೊಲೆ ಮಾಡಿ ನಂತರ ಆತನ ಅಣ್ಣನಾದ ಮಹಬೂಬ್ ಸಾಬ್ ರವರ ಮೇಲೆ ಮಚ್ಚಿನಿಂದ ಹೊಡೆದು ತೀವ್ರವಾಗಿ ರಕ್ತಗಾಯಪಡಿಸಿ ನಂತರ ಆರೋಪಿಯು ರವರು ಅದೇ ಕಬ್ಬಿಣದ ಮಚ್ಚನ್ನು ಅಲೆ, ಬಿಸಾಕಿ ಪಿಸ್ತೂಲ್, ಬ್ಯಾಗ್ ತೆಗೆದುಕೊಂಡು ಕೆ.ಎ-51 ಕ್ಯೂ-8547 ನೊಂದಣಿ ಸಂಖ್ಯೆಯ ಟಿ.ವಿ.ಎಸ್.ಸ್ಕೂಟಿ ಪೆಪ್ ದ್ವಿಚಕ್ರವಾಹನದಲ್ಲಿ, ಬಾಗೇಪಲ್ಲಿಯಲ್ಲಿ ವಾಸವಿರುವ ಆತನ ಹೆಂಡತಿ ಶಾಹೇದಾ ರವರನ್ನು ಕೊಲೆ ಮಾಡಲು ಬಾಗೇಪಲ್ಲಿ ಗೆ ಹೋಗಿದ್ದಾಗ ಅಲ್ಲಿ ಗುಡಿಬಂಡೆ ಪೊಲೀಸರು ಆತನನ್ನು ವಶಕ್ಕೆ ಪಡೆದುಕೊಂಡಿರುವುದಾಗಿ, ಗಾಯಗೊಂಡಿದ್ದ ಮಹಬೂಬ್ ಸಾಬ್ ಬಿನ್ ಲೇಟ್ ಖಾಜಾಸಾಬ್ ರವರನ್ನು ಚಿಕಿತ್ಸೆಯ ಸಲುವಾಗಿ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಿದ್ದಾಗ ಅದೇ ದಿನ ಬೆಳಗ್ಗೆ ಸುಮಾರು 11:26 ಗಂಟೆ ಸಮಯದಲ್ಲಿ ಮೃತಪಟ್ಟಿರುವುದಾಗಿ

ತಿಳಿಯಿತು ಎಂದರೆ ಸರಿಯಲ್ಲ . ಈ ಬಗ್ಗೆ ನಾನು ಪೊಲೀಸರೊಂದಿಗೆ **ನಿಪಿ.**12 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ .

8. ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು, ಆ ಬಗ್ಗೆ ನಾನು ನಿಪಿ – 12 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ವಿ ವಕೀಲರಿಂದಃ**

9. ಆರೋಪಿಯ ಹೆಸರನ್ನು ಪೊಲೀಸರೇ ನನಗೆ ಹೇಳಿರುತ್ತಾರೆ ಎಂದರೆ ನಿಜ . ಪೊಲೀಸರು ಹೇಳುವುದಕ್ಕಿಂತ ಮುಂಚೆ ಆರೋಪಿಯ ಹೆಸರು ನನಗೆ ಗೊತ್ತಿರುವುದಿಲ್ಲ . ನಾನು ನಡೆಸುತ್ತಿದ್ದ ಲಾಡ್ಜ್ ಮೊದಲು ಯಾರು ನಡೆಸುತ್ತಿದ್ದರು ಎಂದು ಅವರ ಹೆಸರು ಗೊತ್ತಿರುವುದಿಲ್ಲ . ದಿಃ01.04.2024 ರಂದು ಅಮರ್ ನಾಥ್ ಎಂಬುವವರು ಶ್ರೀ ಕೃಷ್ಣ ಡಿಲೆಕ್ಸ್ ಲಾಡ್ಜ್ ನ್ನು ನಡೆಸುತ್ತಿದ್ದರು ಎಂದು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ .

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 13.08.2026 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

sd/-

**(ಸಿದ್ದಣ್ಣ.ಬಿ.ಹಂದ್ರಾಳ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.